ಅಸಲು ದಾವೆ ನಂಃ 410/2023 ಪಿ . ಡಬ್ಲ್ಯೂಃ 1-ಗಂಗವ್ವ ಕೋಂ ಶೇಖರಗೌಡ ಮರಿಯಪ್ಪಗೌಡ್ರ
ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 03/02/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ PKU ವಕೀಲರಿಂದಃ**

ನನಗೆ ದಾವಾ ಆಸ್ತಿಯ ಸರ್ವೆ ನಂಬರ ಗೊತ್ತಿರುವುದಿಲ್ಲ. ನಾನು ಈ ದಾವೆಯನ್ನು ನಮ್ಮ ಹೊಲದಲ್ಲಿ ದಾರಿ ಇಲ್ಲದೇ ಇದ್ದರೂ ಸಹ ಬೇಳೆ ಇದ್ದಾಗ ನಮ್ಮ ಹೊಲದಲ್ಲಿಯೇ ಹೋಗುತ್ತಾರೆ, ನಾವು ಹೋಗದಂತೆ ಹೇಳಿದಾಗ ನಮಗೆ ಹೊಡಿ-ಬಡಿ ಮಾಡಿರುತ್ತಾರೆ ಹಾಗಾಗಿ ಈ ದಾವೆಯನ್ನು ಸಲ್ಲಿಸಿರುವುದಾಗಿ ಸಾಕ್ಷಿಯು ನುಡಿದಿರುತ್ತಾರೆ. ನಾನು ಈ ದಾವೆಯನ್ನು ನಿಂಗಬಸಪ್ಪ , ಲಕ್ಷ್ಮಪ್ಪ , ಯಲ್ಲಪ್ಪ ರವರ ಮೇಲೆ ದಾವೆಯನ್ನು ದಾಖಲು ಮಾಡಿರುತ್ತೇವೆ. ಪ್ರತಿವಾದಿಯವರ ಆಸ್ತಿಯ ಸರ್ವೆ ನಂಬರ ನನಗೆ ನೆನಪಿಲ್ಲ. ಸರ್ವೆ ನಂ.213 ರಲ್ಲಿ 5-6 ಹಿಸ್ಸಾಗಳು ಇರುತ್ತವೆ. ಸರ್ವೆ ನಂ.213 ರಲ್ಲಿ 5-6 ಹಿಸ್ಸಾಗಳು ಇರುವುದು ಬೇರೆ ಬೇರೆ ವ್ಯಕ್ತಿಗಳದ್ದು ಎಂದರೆ ಸರಿ. ಸರ್ವೆ ನಂ.213 ಮೂಲತಃ ನನ್ನ ಮಾವನವರಾದ ಬಸವನಗೌಡ ರವರಿಗೆ ಸೇರಿದ್ದು ಇರುತ್ತದೆ. ಸರ್ವೆ ನಂ.213 ಆಸ್ತಿಯು 21 ಎಕರೆಯಲ್ಲಿ ಕಾಲು ಗುಂಟೆ ಕಡಿಮೆ ಇರುತ್ತದೆ. ಸರ್ವೆ ನಂ.213 ರ ಪೈಕಿ 6 ಎಕರೆ 6 ಗುಂಟೆ ನಮಗೆ ಸೇರಿರುತ್ತದೆ. ಸರ್ವೆ ನಂ.213 ರ ವಿಸ್ತೀರ್ಣ 6 ಎಕರೆ 6 ಗುಂಟೆ ಜಮೀನಿನಲ್ಲಿ ಮೂರು ಹಿಸ್ಸಾ ಇರುತ್ತದೆ. ಸದರಿ ಮೂರು ಹಿಸ್ಸಾಗಳು ದ್ಯಾಮನಗೌಡ ಮರಿಯಪ್ಪಗೌಡ್ರ, ನಿಂಗನಗೌಡ ಮರಿಯಪ್ಪಗೌಡ್ರ, ಶೇಖರಗೌಡ ಮರಿಯಪ್ಪಗೌಡ್ರ ರವರಿಗೆ ಸೇರಿರುತ್ತದೆ. ದ್ಯಾಮನಗೌಡ ಮರಿಯಪ್ಪಗೌಡ್ರ, ನಿಂಗನಗೌಡ ಮರಿಯಪ್ಪಗೌಡ್ರ, ಶೇಖರಗೌಡ ಮರಿಯಪ್ಪಗೌಡ್ರ ರವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.213 ರಲ್ಲಿ 5-6 ಹಿಸ್ಸಾ ಇರುವ ಮಾಲೀಕರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಈ ಮೇಲೆ ಹೇಳಿದವರನ್ನು ಪಕ್ಷಗಾರರನ್ನಾಗಿ ಮಾಡದ ಹೊರತು ಈ ದಾವೆಯನ್ನು ದಾಖಲು ಮಾಡಲು ಬರುವುದಿಲ್ಲ ಎಂದರೆ ಸರಿ. ಸರ್ವೆ ನಂ.213 ರ ಹಿಸ್ಸಾದಾರರು ತಮ್ಮ ತಮ್ಮ ಜಮೀನಿಗೆ ನಿಮ್ಮ ಹೊಲದ ದಾರಿಯಿಂದಲೇ ಹೋಗುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಹೊಲದಲ್ಲಿ ದಾರಿ ಇರುವುದಿಲ್ಲ ಮತ್ತು ಆ ದಾರಿಯಿಂದ ಓಡಾಡುವುದಿಲ್ಲ ಇದ್ದರೇ ಓಡಾಡುವುದಕ್ಕೆ ಹೇಳಿ ಎಂದು ನುಡಿದಿರುತ್ತಾರೆ. ಹಾಗೆಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ನಮ್ಮ ಹೊಲದಲ್ಲಿ ದಾರಿ ಇರುವುದಿಲ್ಲ ಎಂದು ಘೋಷಣಾತ್ಮಕ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈ ದಾವೆಯಲ್ಲಿಯೇ ಸದರಿ ಪರಿಹಾರವನ್ನು ಕೇಳಿರುತ್ತೇವೆ ಎಂದು ನುಡಿದಿರುತ್ತಾರೆ. ನಾನು ಸದರಿ ದಾವೆಯಲ್ಲಿ ಘೋಷಣಾತ್ಮಕ ಪರಿಹಾರವನ್ನು

ಕೇಳದೇ ಇದ್ದರೂ ಸಹ ಕೇಳಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಬರೆದಿರುವ ಸಂಗತಿ ನನಗೆ ತಿಳಿದಿರುತ್ತದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳನು ನನಗೆ ತಿಳಿದಿರುತ್ತವೆ. ಸರ್ವೆ ನಂ.213/2 ಮತ್ತು ಸರ್ವೆ ನಂ.213/1 ಕ್ಕೆ ಸಂಬಂಧಿಸಿದಂತೆ ನಮ್ಮ ಹೊಲದಲ್ಲಿ ದಾರಿ ಇರುವುದಿಲ್ಲ, ದಾರಿ ಎಲ್ಲಿ ಇರುತ್ತದೆ ಅಲ್ಲಿ ಹುಡುಕಿಕೊಂಡು ಓಡಾಡಲಿ ಎಂದು ನನ್ನ ವಾದಪತ್ರದಲ್ಲಿ ಬರೆಸಿರುತ್ತೇನೆ. ನಮ್ಮ ಜಮೀನಿನ ಚಕಬಂದಿ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಉತಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಉತಾರವು ನನ್ನ ಗಂಡ ಶೇಖರಗೌಡರವರ ಹೆಸರಿಲ್ಲಿ ಇರುತ್ತದೆ. ಈಗ ಅವರು ತೀರಿಕೊಂಡಿರುತ್ತಾರೆ. ನನಗೆ ಇಬ್ಬರೂ ಮಕ್ಕಳು. ಅವರ ಹೆಸರು 1. ಕುಬೇರಗೌಡ 2. ಸುಭಾಷಗೌಡ. ನನ್ನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಮತ್ತು ನನ್ನ ಮಕ್ಕಳು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನ್ನ ಗಂಡನ ಹೆಸರಲ್ಲಿ ಇರುವ ಆಸ್ತಿಯ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ಆಸ್ತಿಗಳು ನನ್ನ ಮತ್ತು ನನ್ನ ಮಕ್ಕಳ ಹೆಸರಿನಲ್ಲಿ ಆಗಿರಬಹುದು ಎಂದು ನುಡಿದಿರುತ್ತಾರೆ. ನಮ್ಮ ಜಮೀನು ನನ್ನ ಗಂಡನಿಗೆ ಮತ್ತು ನಮಗೆ ಹೇಗೆ ಬಂತು ಎಂದು ತೋರಿಸಲು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ವಾದಪತ್ರದ ಜೊತೆಗೆ ಹಾಜರುಪಡಿಸಿರುವ ಹಾತನಕಾಶೆಗೆ ನಾನು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ಹಾತನಕಾಶೆಯಲ್ಲಿ ಕಾಣಿಸಿದ ಸಂಗತಿ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಮಕ್ಕಳು ಬರೆಸಿರುತ್ತಾರೆ ಎಂದು ನುಡಿದಿರುತ್ತಾರೆ.

2. ಬಸವ್ವ ಕೋಂ ಗೌಡಪ್ಪಗೌಡ ಕುಲಕರ್ಣಿ, ಯಲ್ಲವ್ವ ಕೋ ತೋಟಪ್ಪ ಓಲಿ ಇವರ ಪರಿಚಯ ನನಗೆ ಇರುತ್ತದೆ. ಗೌಡಪ್ಪಗೌಡರವರು ನನಗೆ ಮಾವನಾಗಬೇಕು, ಬಸವ್ವ ರವರು ಗೌಡಪ್ಪಗೌಡರವರ ಹೆಂಡತಿ, ಯಲ್ಲವ್ವರವರು ಗೌಡಪ್ಪಗೌಡರವರ ಮಗಳು ಇರುತ್ತಾರೆ. ಗೌಡಪ್ಪಗೌಡರವರಿಗೆ ಸರ್ವೆ ನಂ.213/2 ಎ ವಿಸ್ತೀರ್ಣ 4 ಎಕರೆ ಆಸ್ತಿಯು ಅವರಿಗೆ ಸೇರಿರುತ್ತದೆ ಎಂದರೆ ಸರಿ. ಗೌಡಪ್ಪಗೌಡರವರು ಸಹ ಸರ್ವೆ ನಂ.213/7 ರ ಪೂರ್ವದ ಕಡೆಗೆ ಹೋಗಿ ಪಶ್ಚಿಮಕ್ಕೆ ಹೊರಳಿ ತಮ್ಮ ಜಮೀನಿಗೆ ಸೇರುತ್ತಿದ್ದರು ಎಂದರೆ ಸರಿ. ಸರ್ವೆ ನಂ.213/2 ಎ ವಿಸ್ತೀರ್ಣ 4 ಎಕರೆ ಆಸ್ತಿಯನ್ನು ದಿಃ 03-06-1978 ರಂದು ಬಸವ್ವ ಮತ್ತು ಯಲ್ಲವ್ವರವರು ನೀಲಪ್ಪ ತಂದೆ ಲಕ್ಷ್ಮಪ್ಪ ಗುದಗಿರವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿ .ನೀಲಪ್ಪ ತಂದೆ ಲಕ್ಷ್ಮಪ್ಪ ಗುದಗಿರವರು ಸಹ ಸರ್ವೆ ನಂ.213/7 ರ ಪೂರ್ವದ ಕಡೆಗೆ ಹೋಗಿ ಪಶ್ಚಿಮಕ್ಕೆ ಹೊರಳಿ ತಮ್ಮ ಜಮೀನಿಗೆ ಸೇರುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಹೊಲದಲ್ಲಿ ದಾರಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಗೌಡಪ್ಪಗೌಡ ಮತ್ತು

ಅವರ ಪೂರ್ವಜರ ಕಾಲದಿಂದಲೂ ಸಹ ಸದರಿ ದಾರಿಯು ಅಸ್ತಿತ್ವದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ದಾರಿಯು ಇದ್ದರೂ ಸಹ ಪ್ರತಿವಾದಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ದಾರಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೇಳಿದ್ದು , ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.